# ಮನದ ಕೀಲಿ ಕೈ ಸುಳಿವಿನ ಹೊಳಹು

“‘ನಿಧಿ ಹುಟ್ಟಿದ ಮೇಲೆ ನಡೆದ ಘಟನೆ ಇದು. ನಿವಿ ಮಗೂ ಜೊತೆ ರೂಮಲ್ಲಿದ್ಲು. ನಾನು ನನ್ನ ಫ್ರೆಂಡ್ಸ್ ನಮ್ಮನೆ ಟೆರೇಸ್‌ನಲ್ಲಿ ಪಾರ್ಟಿ ಮಾಡ್ತಿದ್ವಿ. ಕೆಲವರು ನನ್ನ ಬಿಸಿನೆಸ್ ಕೊಡುವವರೂ ಇದ್ದರು. ಮ್ಯೂಸಿಕ್ ಇತ್ತು. ಸ್ವಲ್ಪ ಲಿಕ್ಕರ್ ತರಿಸಿದ್ವಿ. ನಾನು ಅಪರೂಪಕ್ಕೆ ಬಿಯರ್ ಕುಡೀತೀನಿ. ಫ್ರೆಂಡ್ಸ್ ಸಲುವಾಗಿ ತರಿಸಿದ್ದೆ. ಆದರೆ ನಿವಿ ಕರೆಯದೇ ಅನಿರೀಕ್ಷಿತವಾಗಿ ಮೇಲೇರಿ ಬಂದವಳು. ಮ್ಯೂಸಿಕ್ ಸಿಸ್ಟಮ್ ಆಫ್ ಮಾಡಿದಳು. ನನಗೆ ಅವಳ ವರ್ತನೆಯಿಂದ ಮುಖಭಂಗವಾಯಿತು. ಅವಳನ್ನು ಪ್ರತ್ಯೇಕವಾಗಿ ಕರೆದು ಅನುಚಿತವಾಗಿ ನಡೆದುಕೊಳ್ಳದಂತೆ ಬಿನ್ನವಿಸಿಕೊಂಡೆ. ಅವಳ ಮುಖದಲ್ಲಿ ಅದೇನೋ ಕಠೋರತೆ ಇತ್ತು. ಆಗ ಅವಳು ಬೇರೆಯೇ ಆಗಿ ಕಂಡಳು. ಅವಳ ಮುಖ ಗಡುಸಾಗಿತ್ತು, ದನಿ ಕೂಡ.

‘ಅವರನ್ನೆಲ್ಲಾ ಈಗಲೇ ಹೋಗಲು ಹೇಳಿ’ ಎಂದು ಏರುಸ್ವರದಲ್ಲಿ ನುಡಿದಾಗ ಒಳಗಿದ್ದ ನನ್ನ ಸ್ನೇಹಿತರಿಗೆ ಅವಳ ಮಾತು ಕೇಳಿಸಿತ್ತು. ನನಗೆ ಅವಮಾನದಿಂದ ಜೀವ ಹಿಡಿಯಷ್ಟಾಗಿತ್ತು.

ನನ್ನ ಸ್ನೇಹಿತ ಹೊರ ಬಂದು, ‘ಎನೀ ಪ್ರಾಬ್ಲಂ? ನಮ್ಮಿಂದ ತೊಂದ್ರೆ ಆಯ್ತಾ?’ ಕೇಳಿದ.

ನಾನು ತಡಬಡಿಸಿ ಏನೋ ಉತ್ತರಿಸುವಷ್ಟರಲ್ಲಿ ನಿವೇದಿತಾ ಮುಂದೆ ಬಂದು, ‘ಹೌದು. ನನಗೆ ಈ ವಾತಾವರಣ ಹಿಡಿಸುತ್ತಿಲ್ಲ. ನನಗೆ ಇಷ್ಟವೂ ಇಲ್ಲ. ದಯವಿಟ್ಟು ನೀವು ಅರ್ಥ ಮಾಡಿಕೊಂಡು ನಿಮ್ಮ ಈ ಪಾರ್ಟಿಯನ್ನು ಬೇರೆಲ್ಲಾದರೂ ಆಚರಿಸಿ. ಈ ಮನೆಯಲ್ಲಿ ಅಲ್ಲ’ ಎಂದು ನೇರವಾಗಿ ಮುಖಕ್ಕೆ ಹೊಡೆದಂತೆ ನುಡಿದುಬಿಟ್ಟಳು. ನನ್ನ ಸ್ನೇಹಿತರೆಲ್ಲರೂ ತಲೆ ಕೆಳಗೆ ಹಾಕಿ ಅಲ್ಲಿಂದ ಎದ್ದು ಹೋಗಿದ್ದರು. ನನಗದು ತೀರಾ ಅವಮಾನಕರ ಘಟನೆಯಾಗಿತ್ತು. ನಿವಿಯ ಬಗ್ಗೆ ನನಗೆ ಅಂದು ತುಂಬಾ ಬೇಸರವೂ ಮೂಡಿತ್ತು. ಆದರೆ ಅವಳು ಅದನ್ನು ಗಣನೆಗೇ ತೆಗೆದುಕೊಳ್ಳದವಳಂತೆ ಅಲ್ಲಿಂದ ಎದ್ದು ಹೋಗಿದ್ದಳು. ನಂತರವೂ ಆಕೆಗೆ ತನ್ನ ವರ್ತನೆಯ ಬಗ್ಗೆ ಯಾವ ಮುಜುಗರ, ಪಶ್ಚಾತ್ತಾಪವಾಗಲೀ, ತಪ್ಪಿತಸ್ಥ ಭಾವನೆಯೇ ಇರಲಿಲ್ಲ. ಏನೂ ನಡೆದೇ ಇಲ್ಲವೇನೋ ಎಂಬಂತೆ ಸಹಜವಾಗಿ ನನ್ನ ಬಳಿ ವರ್ತಿಸಿದಾಗ, ಆಕೆಗೆ ತನ್ನ ಕೃತ್ಯದ ನೆನಪೇ ಇಲ್ಲವೇ ಎಂದು ನಾನೇ ಅಚ್ಚರಿಪಡುವಷ್ಟು ನಾರ್ಮಲ್ಲಾಗಿ ಆಕೆ ಇದ್ದುಬಿಟ್ಟಳು. ನಾನೇ ಅವಳ ಬಳಿ ಕೆದಕಿ ‘ಆ ಪಾರ್ಟಿ ಮುಗಿಯುವ ತನಕ ನೀನು ಕಾಯಬಹುದಿತ್ತು. ಆದರೆ ನೀನು ದುಡುಕಿಬಿಟ್ಟೆ ನಿವಿ. ನನಗೆ ನನ್ನ ಸ್ನೇಹಿತರ ಮುಂದೆ ಮುಖ ತೋರಿಸದಂತೆ ಮಾಡಿದೆ. ನಿನ್ನಿಂದ ಇಂಥ ವರ್ತನೆ ನಿರೀಕ್ಷಿಸಿರಲಿಲ್ಲ. ನಿನ್ನ ಬಳಿ ಹೇಳಿಯೇ ತಾನೇ ನಾನು ಈ ಪಾರ್ಟಿ ಆರ್ಗನೈಸ್ ಮಾಡಿದ್ದು? ಮತ್ತೇಕೆ ಹೀಗೆ ವರ್ತಿಸಿದೆ?’ ಎಂದು ಅಸಮಾಧಾನ ಹೊರಹಾಕಿದೆ.

‘ನಮ್ಮ ಮನೇಲಿ ಹೆಣ್ಣು ಮಗು ಇದೆ ಎಂದು ಮರೆಯಬೇಡಿ ಪ್ರದೀಪ್. ನನ್ಗೆ ಇದೆಲ್ಲಾ ಇಷ್ಟವಾಗಲ್ಲ. ನೀವು ಮನೆಗೆ ಯಾವ ಗಂಡಸರನ್ನೂ ಕರೆಯಕೂಡದು. ನನಗೆ ಹಿಂಸೆಯಾಗುತ್ತೆ. ಈ ವಿಷಯದ ಬಗ್ಗೆ ಇನ್ನು ನಾವು ಮಾತನಾಡುವುದು ಬೇಡ’ ಎಂದು ಮಾತು ಮೊಟಕುಗೊಳಿಸಿದ್ದಳು. ನನಗೆ ಅವಳ ಮಾತಿನ ತಲೆಬುಡವೊಂದೂ ಅರ್ಥವಾಗಿರಲಿಲ್ಲ.

